**ಇಂದು ದಿನಾಂಕ:19.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ನನಗೆ ಕನ್ನಡ ಓದು ಬರಹ ಗೊತ್ತು. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ, ಪ್ರತಿವಾದಿ ಮತ್ತು ನನಗೆ ರಕ್ತ ಸಂಬಂಧ ಇರುವುದಿಲ್ಲ. ನಾನು ಉಪ್ಪಾರ ಸಮುದಾಯಕ್ಕೆ ಸೇರಿದ್ದೇನೆ. 1 ನೇ ಪ್ರತಿವಾದಿಯ ತಾತ ಮತ್ತು ಅಜ್ಜಿಯ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯ ತಾತನಿಗೆ ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ಆಸ್ತಿ ಇತ್ತು ಮತ್ತು ಅವುಗಳ ಚೆಕ್ಕುಬಂಧಿ ಗೊತ್ತಿಲ್ಲ. 1 ನೇ ಪ್ರತಿವಾದಿಯ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಇಬ್ಬರು ಪತ್ನಿಯರು ಎಂದರೆ ಸರಿ. ಮೊದಲನೆಯ ಹೆಂಡತಿಯ ಹೆಸರು ಲಕ್ಷ್ಮಮ್ಮ ಎಂದರೆ ಸರಿಯಲ್ಲ ಯಲ್ಲಮ್ಮ. 1 ನೇ ವಾದಿಯನ್ನು ಕರಿಯಪ್ಪ ಎಂತಲೂ ಕರೆಯುತ್ತಾರೆ ಎಂದರೆ ಗೊತ್ತಿಲ್ಲ. ಎರಡನೆಯ ಹೆಂಡತಿಯ ಹೆಸರು ಶಿವಮ್ಮ ಎಂದರೆ ಸರಿ. ಎರಡನೆಯ ಹೆಂಡತಿ ಶಿವಮ್ಮಳಿಗೆ ಗೋವಿಂದ ಎಂಬ ಮಗ ಇದ್ದ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ 2 ನೇ ಪ್ರತಿವಾದಿ 1 ನೇ ವಾದಿಯ ತಂಗಿ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯನ್ನು ನೋಡಿಲ್ಲ. 1 ನೇ ಪ್ರತಿವಾದಿಯ ಕುಟುಂಬದ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು. ಕರೀಗೌಡರ ಹೆಂಡತಿಯ ಹೆಸರು ತಿಮ್ಮಮ್ಮ.

1 ನೇ ಪ್ರತಿವಾದಿ ಮತ್ತು ಅವರ ತಾಯಿ ದಿನಾಂಕ 06.09.1989 ರಲ್ಲಿ ಅವರ ಕುಟುಂಬದ ಆಸ್ತಿಗಳನ್ನು ನೊಂದಾಯಿತ ವಿಭಾಗಪತ್ರದ ಮೂಲಕ ಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. 1 ನೇ ವಾದಿಯ ಭಾಗಕ್ಕೆ ಯಾವ ಯಾವ ಆಸ್ತಿಗಳು ಬಂದಿದೆ ಎಂದು ಹೇಳಲು ಸಾಧ್ಯವೇ ಎಂದರೆ ಇನ್ನು ಹಂಚಿಕೊಂಡಿಲ್ಲ. ಈ ಕೇಸಿಗೆ ಸಂಬಂಧಿಸಿದ ಆಸ್ತಿಗಳ ದಾಖಲೆಗಳನ್ನು ನೋಡಿಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಬೇರೆ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಅವರು ವಾಸ ಮಾಡುತ್ತಿದ್ದ ಮನೆಯ ಮಧ್ಯೆ ಗೋಡೆ ಹಾಕಿಕೊಂಡಿದ್ದಾರೆ ಎಂದರೆ

ನೋಡಿಲ್ಲ. 1 ನೇ ವಾದಿ ಪ್ರತ್ಯೇಕವಾಗಿ ಬೇರೆ ಮನೆಯಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ ವಾಸ ಮಾಡುತ್ತಿದ್ದಾರೆ ಎಂದರೆ ನೋಡಿಲ್ಲ.

ಸ.ನಂ.35/2 ರಲ್ಲಿ 9 ಎಕರೆ 14 ಗುಂಟೆ, ಸ.ನಂ.37/2 ರಲ್ಲಿ 4 ಎಕರೆ ಈ ಜಮೀನುಗಳಿಗೆ ಕೇಸು ಹಾಕಿದ್ದಾರೆ. ಈ ಎರಡೂ ಜಮೀನುಗಳಿಗೆ ಕೇಸು ಹಾಕಿರುವ ಬಗ್ಗೆ ವಾದಿ ಮಾಹಿತಿ ಕೊಟ್ಟಿದ್ದಾರೆಯೇ ಎಂದರೆ ನಮ್ಮ ಜಮೀನಿನ ಪಕ್ಕದಲ್ಲಿರುವುದರಿಂದ ನನಗೆ ಗೊತ್ತಿದೆ. ಕರೀಗೌಡರ ವಂಶವೃಕ್ಷದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳ ಮಾಹಿತಿಯನ್ನು 1 ನೇ ವಾದಿ ಕೊಟ್ಟಿದ್ದಾರೆ ಎಂದರೆ ಸರಿ. ನಾನು ಮತ್ತು 1 ನೇ ವಾದಿ ಸ್ನೇಹಿತರು ಎಂದರೆ ಸರಿ. ಆ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಕುಟುಂಬಗಳ ನಡುವೆ ಈ ಹಿಂದೆಯೇ ಭಾಗ ಆಗಿದ್ದು ಅದರಂತೆ ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**